ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**ದಿನಾಂಕಃ 10-10-2017.**

**ಪಾಟೀ ಸವಾಲು ಶ್ರೀ ವೈ.ಕೆ.ಪಿ., ವಕೀಲರಿಂದ.**

ನನಗೆ ಈಗಲೂ ಸಹ ಆರೋಗ್ಯ ಚನ್ನಾಗಿಲ್ಲ. ನಾನು ಅಸಲು ದಾವಾ ಸಂಖ್ಯೆ 298/2003 ರಲ್ಲಿ ನಾನು ಎಷ್ಟು ಬಾರಿ ಹಾಜರಾಗಿದ್ದೇನೆ ಎಂದು ನೆನಪಿಲ್ಲ. ನಾನು ವಕೀಲರ ಕಛೇರಿಗೆ ಎರಡು ಬಾರಿ ಬೇಟಿ ನೀಡಿರುತ್ತೇನೆ. ಸದರಿ ದಾವೆಯಲ್ಲಿ ವಾದಿಯ ವಿಚಾರಣೆ ಯಾವ ದಿನಾಂಕದಂದು ಆಯಿತು ಎಂದು ಗೊತ್ತಿಲ್ಲ. ನಾನು ನಮ್ಮ ವಕೀಲರನ್ನು ಲಿಖಿತ ಹೇಳಿಕೆ ಸಲ್ಲಿಸಿದ ನಂತರ ಪಾಟೀ ಸವಾಲು ಮಾಡುವ ವಿಚಾರವಾಗಿ ಬೇಟಿ ಮಾಡಿಲ್ಲ. ನನಗೆ ದಿನಾಂಕಃ20.03.2006 ರಲ್ಲಿ ಅಸಲು ದಾವಾ ಸಂಖ್ಯೆ 298/2003 ಡಿಕ್ರಿಯಾದ ವಿಚಾರ ನನ್ನ ವಕೀಲರ ತಾಂಡವೇಶ್ವರ ಮೂಲಕ ತಿಳಿಯಿತು ಎಂದರೆ ಸಾಕ್ಷಿಯು ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ.

ಡಿಕ್ರಿಯಾಗಿರುವ ವಿಚಾರ ಒಂದು ವರ್ಷದ ನಂತರ ನನಗೆ ತಿಳಿಯಿತು. ಡಿಕ್ರಿಯಾಗಿರುವ ವಿಚಾರ ನನಗೆ 2007ನೆ ಸಾಲಿನಲ್ಲಿ ಜಮೀನ ಬಳಿ ತಿಳಿಯಿತು. ಸದರಿ ಡಿಕ್ರಿಯಾದ ನಂತರ ಪ್ರಶ್ನಿಸಲು 2007ರಲ್ಲಿ ನನಗೆ ಅನಾರೋಗ್ಯದ ಕಾರಣ ಅಂದರೆ ಪಕ್ಕೆ ನೋವು ಇದ್ದ ಕಾರಣ ಆಸ್ಪತ್ರೆಗೆ ಸೇರಿದ್ದು ಈಗಲೂ ಸಹ ಚಿಕಿತ್ಸೆ ಪಡೆಯುತ್ತಿದ್ದೇನೆ. ನಾನು ಚಿಕಿತ್ಸೆ ಮೈಸೂರಿನ ಆರ್ಯುವೇಧಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದೇನೆ. ವೈದ್ಯರು ಹೆಸರು ಗೊತ್ತಿಲ್ಲ. ಮೇಲ್ಕಂಡ ದಾವೆಯಲ್ಲಿ ನನ್ನ ವಕೀಲರು ನಿವೃತ್ತಿಯಾಗಿರುವ ಬಗ್ಗೆ ನನಗೆ ಯಾವುದೆ ನೋಟಿಸು ನೀಡಿಲ್ಲ.

ವಾದಿ ನನಗೆ ತೊಂದರೆ ನೀಡಿದ ನಂತರ ಅಂದರೆ 2007ರ ನಂತರ ನಾನು ತಾಂಡವೇಶ್ವರ ವಕೀಲರನ್ನು ಬೇಟಿ ಮಾಡಿಲ್ಲ, ಎದುರುದಾರರು ಮತ್ತು ಆತನ ತಮ್ಮ ತಮಗೆ ಡಿಕ್ರಿಯಾಗಿದೆ ಎಂದು 2007ನೇ ಸಾಲಿನಲ್ಲಿ ತಿಳಿಸಿರುತ್ತಾರೆ.

ನಾನು ಅಸಲು ದಾವಾ ಸಂಖ್ಯೆ 162/2013 ನ್ನು ಎದರುದಾರರು ಮತ್ತು ಆತನ ಸಹೋದರನ ವಿರುದ್ದ ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ದಾವೆಯನ್ನು ದಿನಾಂಕಃ04.03.2013 ರಲ್ಲಿ ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ದಾವೆಯಲ್ಲಿ ಅಸಲು ದಾವಾ ಸಂಖ್ಯೆ 298/2003 ರ ಬಗ್ಗೆ ನಾನು ನಮ್ಮ ವಕೀಲರಿಗೆ ಮೇಲ್ಕಂಡ ದಾವೆಯನ್ನು ಸಲ್ಲಿಸುವ ಸಮಯಕ್ಕೆ ತಿಳಿಸಿರುತ್ತೇನೆ. ಮೇಲ್ಕಂಡ ಡಿಕ್ರಿಯಂತೆ ಕ್ರಯಪತ್ರವನ್ನು ಎದರುದಾರರು ಬರೆದುಕೊಡಲು ಕೇಳಿದ್ದರು ಎಂದರೆ ಸರಿಯಲ್ಲ ಹಾಗೂ ಬರೆದುಕೊಡುವುದಾಗಿ ಕಾಲಹರಣ ಮಾಡಿದ್ದೇನೆ ಎಂದರೆ ಸರಿಯಲ್ಲ, ಆದ ಕಾರಣ ಎದುರುದಾರರು ಜಾರಿ ಕೇಸಿನ ಸಂಖ್ಯೆ 23/2015 ನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಜಾರಿ ಕೇಸಿನಲ್ಲಿ ತಕರಾರು ತಲ್ಲಿಸಿದ್ದೇನೆ. ಮೇಲ್ಕಂಡ ದಾವೆಯಲ್ಲಿ ನನ್ನ ನಿರ್ಲಕ್ಷತಯಿಂದ ಹಾಜರಾಗದೆ ಹಾಗೂ ವಾದಿಯನ್ನು ಪಾಟೀ ಸವಾಲು ಮಾಡದೇ ಡಿಕ್ರಿಯಾಗಿದೆ ಎಂದರೆ

ಸರಿಯಲ್ಲ. ನನ್ನ ವಕೀಲರು ನನಗೆ ಮೇಲ್ಕಂಡ ದಾವೆಯಲ್ಲಿ ನೋಟಿಸು ನೀಡಿದ್ದು. ನೋಟಿಸಿನ ಪ್ರತಿ ಹಾಗೂ ಅಂಚೆ ಸ್ವೀಕೃತಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ ಎಂದರೆ ಸರಿಯಲ್ಲ. ನನಗೆ ನೋಟಿಸು ನೀಡಿದ್ದು ನನಗೆ ನಿವೃತ್ತಿಯಾದ ವಿಚಾರ *ಗೊತ್ತಿಲ್ಲ, ಮೇಲ್ಕಂಡ ಡಿಕ್ರಿಯಾಗಿರುವ ವಿಚಾರ ದಿನಾಂಕ:21.03.2006 ರಂದೇ ಡಿಕ್ರಿಯಾಗಿರುವ ವಿಚಾರ ನನ್ನ ವಕೀಲರ ಮೂಲಕ ತಿಳಿದಿದೆ ಎಂದರೆ ಸರಿಯಲ್ಲ. ನಾನು ಸುಮಾರು 13 ವರ್ಷಗಳ ಕಾಲ ಯಾವುದೇ ಮೇಲ್ಮನವಿ ಸಲ್ಲಿಸದೆ ತಟಸ್ಥನಾಗಿದ್ದೆ ಎಂದರೆ ಸರಿಯಲ್ಲ. ನನಗೆ 2007ಕ್ಕಿಂತ ಮೊದಲೆ ಡಿಕ್ರಿಯಾಗಿರುವ ವಿಚಾರ ತಿಳಿದಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಎದರುದಾರರ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ಮೇಲ್ಕಂಡ ಡಿಕ್ರಿಯಾಗಿರುವ ವಿಚಾರ 2003 ರಲ್ಲಿ ತಿಳಿಸಿದಿದೆ ಎಂದು ನನ್ನ ಪ್ರಮಾಣ ಪತ್ರಿಕೆಯಲ್ಲಿ ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ಪಕ್ಕೆ ನೋವು ಇರುವ ಬಗ್ಗೆ ನಾನು ನನ್ನ ಪ್ರಮಾಣ ಪತ್ರಿಕೆಯಲ್ಲಿ ಹೇಳಿ ಬರೆಸಿದ್ದೇನೆ. ನಾನು ಚಿಕಿತ್ಸೆ ಪಡೆಯುತ್ತಿರುವ ಬಗ್ಗೆ ನಾನು ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ನಾನು ನನಗೆ ಯಾವುದೇ ಪಕ್ಕೆ ನೋವು ಹಾಗೂ ಬೆನ್ನು ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಹೊಡೆದುಕೊಳ್ಳು ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.*

**<u>ಮರು ವಿಚಾರಣೆ ಇಲ್ಲ:</u>**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,

*(ಎಸ್.ಚಿನ್ನಸ್ವಾಮಿ)*
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ